## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ-ವಿಭಾಗ, ಕುವೆಂಪುನಗರ ಮೈಸೂರು. ದೂರವಾಣಿ ಸಂಖ್ಯೆ 0821-2540343,ಇ-ಮೇಲ್ aeerdwsd.mys@gmail.com**

ಸಂಖ್ಯೆ: ಸಕಾಇಂ:ಗ್ರಾಕುನೀ&ನೈ/ಉವಿಮೈ/ನಿ.ಪತ್ರ/2022-23 ದಿನಾಂಕ 29/03/2023

ರವರಿಗೆ,

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಗುಂಗ್ರಾಲ್‌ಛತ್ರ ಗ್ರಾಮ ಪಂಚಾಯಿತಿ
ಮೈಸೂರು.

**ಮಾನ್ಯರೇ,**

ವಿಷಯ : ಮೈಸೂರು ತಾಲ್ಲೂಕು ಇಲವಾಲ ಹೋಬಳಿ ಯಲಚಹಳ್ಳಿ ಗ್ರಾಮದ ಸರ್ವೆ ನಂ 37/2, 37/3, 37/4 ಮತ್ತು 37/5 ಒಟ್ಟು 12 ಎಕರೆ 24 ಗುಂಟೆ ಅನುಮೋದಿತ ವಸತಿ ಉದ್ದೇಶದ ಬಡಾವಣೆಯ ಕಾಮಗಾರಿಗಳು ಮುಗಿದಿರುವ ಬಗ್ಗೆ ನಿರಾಕ್ಷೇಪಣ ಪತ್ರ ನೀಡುವ ಕುರಿತು.

ಉಲ್ಲೇಖ : ತಮ್ಮ ಕಛೇರಿ ಪತ್ರ ದಿನಾಂಕ: 16-03-2023

****

ಮೈಸೂರು ತಾಲ್ಲೂಕು ಇಲವಾಲ ಹೋಬಳಿ ಯಲಚಹಳ್ಳಿ ಗ್ರಾಮದ ಸರ್ವೆ ನಂ 37/2, 37/3, 37/4 ಮತ್ತು 37/5 ಒಟ್ಟು 12 ಎಕರೆ 24 ಗುಂಟೆ ಅನುಮೋದಿತ ವಸತಿ ಉದ್ದೇಶದ ಬಡಾವಣೆಯ ಕುಡಿಯುವ ನೀರಿನ ಪೈಪ್‌ಲೈನ್ ಮತ್ತು ಒಳಚರಂಡಿ ಕಾಮಗಾರಿ ಸೇರಿದಂತೆ ಕಾಮಗಾರಿ ನಿರ್ವಹಿಸಿರುವ ಬಗ್ಗೆ ಉಲ್ಲೇಖ ಪತ್ರದಲ್ಲಿ ನಿರಾಕ್ಷೇಪಣಾ ಪತ್ರವನ್ನು ಕೋರಿರುವುದು ಸರಿಯಷ್ಟೆ.

ಅದರಂತೆ, ತಾವು ಉಲ್ಲೇಖ (1)ರಲ್ಲಿ ಮನವಿ ನೀಡಿ ಈ ಕಛೇರಿಯಿಂದ ನಿರಾಕ್ಷೇಪಣಾ ಪತ್ರ ನೀಡಬೇಕೆಂದು ಕೋರಿರುತ್ತೀರಿ. ಅದರಂತೆ ಸದರಿ ಜಮೀನಿನ ನಿವೇಶನಗಳನ್ನು **ದಿನಾಂಕ: 21-03-2023** ರಂದು ಸ್ಥಳ ಪರಿಶೀಲನೆ ಮಾಡಲಾಗಿ, ಕುಡಿಯುವ ನೀರಿಗೆ ಸಂಬಂಧಿಸಿದಂತೆ ಕೊಳವೆ ಬಾವಿಯನ್ನು ಕೊರೆಸಲಾಗಿ ಸದರಿ ಬಡಾವಣೆಗೆ ಕೊಳವೆ ಬಾವಿಯಿಂದ 50000 ಲೀಟರ್ ಸಾಮರ್ಥ್ಯದ ಓ.ಹೆಚ್.ಟಿ.ಗೆ ನೀರನ್ನು ಶೇಖರಣೆ ಮಾಡಿ ಬಡಾವಣೆಯ ಪ್ರತಿ ನಿವೇಶನಕ್ಕೂ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಒಳ ಚರಂಡಿಯ ಪೈಪ್ ಲೈನ್, ಮ್ಯಾನ್‌ಹೋಲ್ ಛೇಂಬರ್ ಮತ್ತು ಸೆಪ್ಟಿಕ್ ಟ್ಯಾಂಕ್ ಕಾಮಗಾರಿಯು ತೃಪ್ತಿಕರವಾಗಿ ಪೂರ್ಣಗೊಂಡಿದೆಂಬ ವಿಷಯವನ್ನು ಈ ಮೂಲಕ ತಿಳಿಸಲಾಗಿದೆ.

**ತಮ್ಮ ವಿಶ್ವಾಸಿ,**

ಸಹಾಯಕ ಕಾರ್ಯಪಾಲಕ ಇಂಜಿನಿಯರ್,
ಗ್ರಾ.ಕು.ನೀ.& ನೈರ್ಮಲ್ಯ ಉಪ-ವಿಭಾಗ, ಮೈಸೂರು.